...ಈ ಜಾಡಿನಲ್ಲೇ ರೈಲು ಹತ್ತಿಸುತ್ತಿದ್ದ ರಾಮಸ್ವಾಮಿ ಇದ್ದಕ್ಕಿದ್ದಂತೆ ಟ್ರ್ಯಾಕ್ ಬದಲಿಸಿ, 'ಏ! ಬಿಡಿ ಬಾಸು! ನೀವೇ ಲಕ್ಕಿ! ನಿಮ್ಮ ಜೊತೇಲಿ ಕೆಲಸ ಮಾಡ್ತಿದ್ದೋರೆಲ್ಲ ಐವತ್ತು, ಅರವತ್ತಕ್ಕೇ ಪಟಾರ್ ಅಂದವ್ರಲ್ಲಾ ಬಾಸು!' ಎಂದು ನೆನಪಿಸುತ್ತಾ, ಮತ್ತೆ ಬೆಳಗಿನ ಬಿಡುಬೀಸು ನಗೆ ನಗುತ್ತಾ, 'ನೀವು ನಿಮ್ಮ ಕೋಟಾಕ್ಕಿಂತ ಹೆಚ್ಚೇ ಬದುಕಿದ್ದೀರಿ' ಎನ್ನುವ ಸೂಚನೆ ಹೊರಡಿಸುತ್ತಾ, 'ಫ್ರೀ ಆದಾಗ ಸಿಕ್ಕಣ ಬಾಸು' ಎನ್ನುತ್ತಾ ಫೋನಿಟ್ಟ; ಅವನು ಫೋನಿಟ್ಟ ಸದ್ದಂತೂ 'ನಿನಗೆ ಇದೇ ನನ್ನ ಕೊನೇ ಫೋನ್ ಆದರೂ ಆಗಬಹುದು; ಇನ್ನು ನೀನು ತೀರಿಕೊಂಡರೂ ಚಿಂತೆಯಿಲ್ಲ' ಎಂದು ಮುಖಕ್ಕೆ ಗುದ್ದಿದಂತಾಗಿ ರುದ್ರಣ್ಣನವರಿಗೆ ರೇಗಿಹೋಯಿತು.

'ಎಲ ಎಲಾ! ಈ ಲೋಫರ್ ರಾಮ್ಸ್ವಾಮಿ ಎಂಥಾ ಕ್ರೂರಿ! ನನ್ನ ಸಾವಿನ ಭಯದ ಬಗ್ಗೆ ರವಷ್ಟೂ ತಲೆ ಕೆಡಿಸಿಕೊಳ್ಳಲೇ ಇಲ್ಲವಲ್ಲ; ಇನ್ನು ನೀನು ಸತ್ತು ಹೋದರೂ ಪರವಾಯಿಲ್ಲ ಎನ್ನುವಂತೆ ತೀರಾ ಹಗುರಾಗಿ ಮಾತಾಡಿಬಿಟ್ಟನಲ್ಲ' ಎನ್ನಿಸಿದರೂ ಆ ಮಾತನ್ನು ಮತ್ತೆ ಅವನಿಗೆ ಫೋನ್ ಮಾಡಿ ಬಾಯಿಬಿಟ್ಟು ಹೇಳಿ ಜಗಳ ತೆಗೆಯಲು ಉತ್ಸಾಹ ಬರದೆ ಸಿಟ್ಟನ್ನು ಅದುಮಿಡುತ್ತಾ ರುದ್ರಣ್ಣ ಪೆಚ್ಚಾಗಿ ನಕ್ಕರು. ಯಾಕೋ ತನ್ನ ನಗುವಿನಲ್ಲೂ ಸಾವಿನ ಕಳೆ ಇರುವಂತಿದೆಯಲ್ಲ ಅನ್ನಿಸಿ ಮೇಲೆದ್ದು ಕನ್ನಡಿ

